# **1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ**

## ಸ್ಪೆಷಲ್ ಕೇಸ್: **54/2019**

ಫ್ರಾಸಾ- 14
ಚಾಸಾ- 27

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ.ಟಿ.ಪೊನ್ನಪ್ಪ |
| ತಂದೆಯ ಹೆಸರು | : | ಲೇಟ್ ತಿಮ್ಮಯ್ಯ |
| ವಯಸ್ಸು | : | 59 ವರ್ಷ |
| ವೃತ್ತಿ | : | ಎಎಸ್ ಐ, ಸೋಮವಾರಪೇಟೆ |
| ವಾಸ | : | ಸೋಮವಾರಪೇಟೆ |

ಸಾಕ್ಷಿಯನ್ನು ದಿನಾಂಕ **12-07-2024** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:

ನಾನು ಕಳೆದ 5 ವರ್ಷಗಳಿಂದ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಎಎಸ್ ಐ ಆಗಿ ಕೆಲಸ ಮಾಡುತಿದ್ದೇನೆ.

ದಿನಾಂಕ 21-10-2019 ರಂದು ನಾನು ಕರ್ತವ್ಯದಲ್ಲಿ ಇದ್ದಾಗ ಚಾಸಾ-29 ರವರು ಈ ಪ್ರಕರಣದ ಆರೋಪಿಯ ಪತ್ತೆಯ ಬಗ್ಗೆ ಕ್ರೈಮ್ ಸಿಬ್ಬಂದಿಗಳಾದ ದಯಾನಂದ,ಜೋಸೆಫ್ ಮತ್ತು ಜಗದೀಶ್ ಹಾಗೂ ನನ್ನನ್ನು ರವರನ್ನು ನೇಮಿಸಿ ನಾವು ದಿನಾಂಕ 22-10-2019 ರಂದು ಆರೋಪಿಯ ಪತ್ತೆಯ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಪಡೆದು ಅಬ್ಬೆನಾಡು ಗ್ರಾಮದ ಜಿ.ಎಲ್ ರೆಡ್ಡಿಯವರಿಗೆ ಸೇರಿದ ಕಾಫಿ ತೋಟದಲ್ಲಿ ಇದ್ದ ಉದಿಯತಂಡ ಗಣಪತಿ ಅವರನ್ನು 11.00 ಗಂಟೆಗೆ ವಶಕ್ಕೆ ಪಡೆದು ಚಾಸಾ-29 ರವರ ಎದುರು ಸೋಮವಾರಪೇಟೆ ವೃತ್ತ ನಿರೀಕ್ಷಕರ ಎದುರು ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಈಗ ನಾನು ನೋಡುತ್ತಿರುವ ವರದಿ ನಾನು ನೀಡಿದ ವರದಿ ಆಗಿದ್ದು ಅದನ್ನು ನಿಪಿ-17 ಎಂದು ಅರದಲ್ಲಿ ಇದ್ದ ಸಾಕ್ಷಿ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು. ನಾನು ವಶಕ್ಕೆ ಪಡೆದ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿ ಅವರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು- ಆರೋಪಿತರ ಪರವಾಗಿ ಶ್ರೀ. ಎ.ಜಿ.ಜಿ. ವಕೀಲರಿಂದ:</u>

ಸೋಮವಾರಪೇಟೆಯಿಂದ ಮುಟ್ಲುವಿಗೆ 25 ಕಿ.ಮೀ. ದೂರ ಇದೆ. ಜಿ.ಎಲ್ ರೆಡ್ಡಿ ರವರ ಕಾಫಿ ತೋಟ ಅಚ್ಚೆನಾಡಿನಲ್ಲಿ ಇದೆ. ಸದರಿ ತೋಟದ ಮಾಲೀಕನ ಹೆಸರು ರೆಡ್ಡಿ. ಸದರಿ ತೋಟದ ಮಾಲೀಕನ ಬಗ್ಗೆ ಮಾಹಿತಿಯನ್ನು ನಾನು ಪಡೆದುಕೊಂಡಿಲ್ಲ. ಆರೋಪಿಯ ತಂದೆ-ತಾಯಿಗಳು ಸದರಿ ತೋಟದಲ್ಲಿ ಏನು ಕೆಲಸ ಮಾಡುತಿದ್ದರು ಎಂದರೆ ಸಾಕ್ಷಿ ಕಾಫಿ ತೋಟದ ಕೆಲಸ ಮಾಡುತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಅಚ್ಚೆನಾಡಿನಲ್ಲಿ ಆರೋಪಿಗೆ ಮತ್ತು ಅವರ ತಂದೆ-ತಾಯಿಗೆ ತೋಟ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಜಿ.ಎಲ್ ರೆಡ್ಡಿ ರವರ ತೋಟದಲ್ಲಿ ಆರೋಪಿಯ ಪೋಷಕರು ಕೆಲಸ ಮಾಡುತಿದ್ದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿಲ್ಲ. ಮುಟ್ಲುವಿನಲ್ಲಿ ದಡ್ಡವಾದ ಅರಣ್ಯಪ್ರದೇಶ ಇದೆ ಆದರೆ ಅಲ್ಲಿ ಆನೆಗಳ ಕಾಟ ಇಲ್ಲ. ಜಿ.ಎಲ್ ರೆಡ್ಡಿ ರವರ ತೋಟದ ಅಕ್ಕ-ಪಕ್ಕದಲ್ಲಿ ಯಾರ ತೋಟ ಇದೆ ಎಂದು ನನಗೆ ಗೊತ್ತಿಲ್ಲ. ಅಲ್ಲೇ ಸುತ್ತಮುತ್ತ ಮನೆಗಳಾಗಲೀ, ಅಂಗಡಿಗಳಾಗಲೀ ಇಲ್ಲ. ಆರೋಪಿಗಳ ಪೋಷಕರು ಲೈನ್ ಮನೆಯಲ್ಲಿ ಇದ್ದು ಅಲ್ಲಿ ಒಟ್ಟು 4 ಲೈನ್ ಮನೆಗಳು ಇವೆ. ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳುವ ಸಂದರ್ಭದಲ್ಲಿ ಆತನ ಪೋಷಕರಿಗೆ ಮಾಹಿತಿ ನೀಡಿದ್ದಾಗಲೀ ಅಥವಾ ಅವರಿಂದ ಸಹಿ ತೆಗೆದುಕೊಂಡಿದ್ದಾಗಲೀ ಇದೆಯಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ನಾನು ಸೋಮವಾರಪೇಟೆಯ ಮುಟ್ಲುಗೆ ಹೋಗಿ ಆರೋಪಿಯನ್ನು ಪತ್ತೆಹಚ್ಚಿದ್ದು ಇಲ್ಲ ಮತ್ತು ಅವರನ್ನು ವಶಕ್ಕೆ ಪಡೆದಿದ್ದು ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಅದನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ